ಮೀಸೆ ತಿರುಗುತ್ತಿದ್ದ. ನಾಗತಿ ಯಾವುದೇ ಕೆಲಸವನ್ನು ಬಹಳ ಆತ್ಮವಿಶ್ವಾಸದಿಂದ ಮಾಡುತ್ತಿದ್ದಳು. ಶಿಸ್ತು, ನಿಷ್ಪಕ್ಷಪಾತ ನಿಲುವು ಅವಳಿಗೆ ತಾಯಿಯ ಹೊಟ್ಟೆಯಿಂದಲೇ ಬಂದಿದ್ದವು.

ಓಬವ್ವ ನಾಗತಿಗೆ ತನ್ನ ಹೆತ್ತಮ್ಮ ದೇವಮ್ಮ ನಾಗತಿಯ ಮನಃಸ್ಥಿತಿ ಅರ್ಥವಾಗುತ್ತಿತ್ತು. ತನ್ನ ತಂದೆಗೆ ಹೊಂದಿಕೊಂಡು ಬದುಕುವುದು ಸುಲಭದ ಮಾತಲ್ಲ ಎನ್ನುವುದು ಗೊತ್ತಾಗತೊಡಗಿತು. ದುರ್ಗದ ನಾಯಕರನ್ನು ಕಂಡರೆ ವೆಂಕಟಪ್ಪ ಉರಿದು ಬೀಳುತ್ತಿದ್ದ. ಅಲ್ಲಿಂದ ಯಾರೂ ಬರುವಂತಿಲ್ಲ, ಇವರು ಹೋಗುವಂತಿಲ್ಲ. ದೇವಮ್ಮ ನಾಗತಿ ತನ್ನ ತವರು ಬಳಗದವರನ್ನು ಕಾಣದೆ ಎಷ್ಟೋ ವರ್ಷಗಳಾಗಿದ್ದವು. ಸಮಯ ಸಿಕ್ಕಿದಾಗಲೆಲ್ಲ ದೇವಮ್ಮ, ದುರ್ಗದ ದೇವಾಲಯಗಳು, ಅರಮನೆಯ ವೈಭವ ಇತ್ಯಾದಿಗಳನ್ನು ಕುರಿತು ಮನಸಾರೆ ಹೇಳುತ್ತಿದ್ದಳು. ಇದನ್ನು ಕೇಳುತ್ತಿದ್ದ ಓಬವ್ವ ನಾಗತಿ ಅಪ್ಪಾಜಿಯವರು ದಂಡಿಗೆ ಹೋದಾಗ ತಾನು ತಾಯಿಯನ್ನು ಕುದುರೆ ಮೇಲೆ ಕೂರಿಸಿಕೊಂಡು ಹೋಗಿ ತವರನ್ನು ಸುತ್ತಾಡಿಸಿ ಸಂತೋಷಪಡಿಸಬೇಕೆಂದು ತೀರ್ಮಾನಿಸಿದಳು. ಇದನ್ನು ಕೇಳಿದ ದೇವಮ್ಮ ನಾಗತಿ, 'ನನ್ನ ಪುತ್ರಿ ಮನಸ್ಸು ಮಾಡಿದರೆ ರಾಯನನ್ನು ಜೊತೆಯಲ್ಲೇ ಕರೆದೊಯ್ಯುವಳು' ಎಂದು ಸಂಭ್ರಮಿಸುತ್ತಿದ್ದರು. ಅವ್ವನಿಗೆ ಅವ್ವನಂತೆ ಇರುವ ಓಬವ್ವ ನಾಗತಿಯ ಪಾತ್ರ ಆಗಾಗ ನನ್ನ ಮನಸ್ಸಲ್ಲಿ ಮೂಡುವುದು.

ಒಮ್ಮೆ ಕಾರ್ತಿಕ ಮಾಸದ ಹದಿನಾರನೇ ದಿನ ಆನೆಗೊಂದಿಗೆ ಆನೆಗೊಂದಿಯೇ ಅಂಜನಾದ್ರಿ ಬೆಟ್ಟದ ಕಡೆಗೆ ಪ್ರಯಾಣ ಬೆಳೆಸಿತು. ರಾಯ ಪುತ್ರಿಯೊಡನೆ ಕುದುರೆಯನೇರಿದ. ಅರಮನೆಯ ಪರಿವಾರದವರು ಮತ್ತು ತನ್ನ ಗಂಡು ಮಕ್ಕಳೊಂದಿಗೆ ದೇವಮ್ಮ ನಾಗತಿ ಫಲ ಪುಷ್ಪಗಳೊಡನೆ ಬೆಟ್ಟವೇರಿದಳು. ಆನೆಗೊಂದಿಯವರಿಗಾಗಲಿ, ಓಬವ್ವನಿಗಾಗಲಿ ಅಂಜನಾದ್ರಿ ಸೊಬಗು ಹೊಸದೇನೂ ಅಲ್ಲ. ಬೇಕೆಂದಾಗಲೆಲ್ಲ ಸ್ವಾಮಿಯ ದರುಶನ ಮಾಡಿ ಬರುತ್ತಿದ್ದರು. ಓಬವ್ವ ನಾಗತಿ ತನ್ನ ಸಖಿ ಹೊನ್ನವ್ವಳ ಸಂಗಡ ಬೆಟ್ಟದ ತುಂಬೆಲ್ಲ ವಿಹರಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಅಲ್ಲಿದ್ದವರಲ್ಲಿ ಯಾರೋ ಒಬ್ಬರು, 'ದುರ್ಗದ ಪಾಳೇಗಾರರು ಇತ್ತ ಬರುತ್ತಿದ್ದಾರೆ. ಅತ್ತ ಸರಿಯಿರಿ... ಅತ್ತ ಸರಿಯಿರಿ...' ಎನ್ನುತ್ತಾರೆ. ಇದನ್ನು ಕೇಳಿದ ರಾಯ ಕೋಪಗೊಂಡು, 'ನಡೆಯಿರಿ... ನಡೆಯಿರಿ...' ಎಂದು ಪತ್ನಿಯ ಕಡೆಗೆ ನೋಡುತ್ತಾನೆ, ಕೆಂಗಣ್ಣು ಬಿಡುತ್ತಾನೆ. ದುರ್ಗದ ಪಾಳೇಗಾರ ಹಿರೇಮದಕರಿ ನಾಯಕ ಆನೆಯ ಮೇಲೆ ಕುಳಿತಿರುತ್ತಾನೆ. ಅದು ಅಚ್ಚ ಬಿಳಿಯ ಬಣ್ಣದ ಆನೆ. ತರ ತರದ ಕುದುರೆಗಳು ಆನೆಯ ಹಿಂದೆ ಹೋಗುತ್ತಿರುತ್ತವೆ. ಇವರು ಬೆಟ್ಟ ಇಳಿಯುವುದಕ್ಕೂ ಅವರು ಏರುವುದಕ್ಕೂ ಸರಿಯಾಗುತ್ತದೆ.

ಅಂದು ಓಬವ್ವ ನಾಗತಿ ಹಿರೇಮದಕರಿ ನಾಯಕನನ್ನು ನೋಡಿ 'ವಿವಾಹವಾದರೆ ಇವರನ್ನೇ, ಸೇರಿದರೆ ದುರ್ಗವನ್ನೇ' ಎಂದು ತೀರ್ಮಾನಿಸುತ್ತಾಳೆ. ಅವ್ವನ ತವರು ಸಂಬಂಧ ಉಳಿಸಲೇಬೇಕೆಂಬ ನಿರ್ಧಾರ ಅವಳದು. ಆದರೆ, ತಂದೆಯನ್ನು ಎದುರಿಸಿ ವಿವಾಹವಾಗುವುದು ಸಾಧ್ಯವೇ? ಅದನ್ನು ಸಾಧ್ಯ ಮಾಡಿಕೊಂಡ ಗಟ್ಟಿಗಿತ್ತಿ ಆಕೆ.

ಈಗಲೇ ರಾಯ ಹರಪ್ಪನಹಳ್ಳಿ ಪಾಳೇಗಾರನಾಗಿದ್ದ ಸೋಮಶೇಖರನ ಪುತ್ರ ಪುಟ್ಟರಸನೊಂದಿಗೆ ಓಬವ್ವ ನಾಗತಿಯ ವಿವಾಹವನ್ನು ನಿಶ್ಚಯಿಸುತ್ತಾನೆ. ಆದರೆ, ವಿವಾಹ ಮಂಟಪದಲ್ಲಿ ನಡೆದದ್ದೇ ಬೇರೆ. ಚಿತ್ರದುರ್ಗಕ್ಕೂ ವಿವಾಹದ ಕರೆಯೋಲೆ ಕಳಿಸುತ್ತಾರೆ. ಹಿರೇಮದಕರಿ ನಾಯಕರು ಬಂದೇ ಬರುತ್ತಾರೆ ಎಂದು ಕಾಯುತ್ತಿದ್ದ ನಾಗತಿಗೆ, ಹೊನ್ನವ್ವ ಧೈರ್ಯ ಹೇಳುತ್ತಿರುತ್ತಾಳೆ. ವಿವಾಹದ ಹೆಬ್ಬಾಗಿಲಿಗೆ ಒಂದು ಆಳೆತ್ತರದ ಗಂಡು ಆಕೃತಿಯ ಪ್ರತಿಮೆಯನ್ನು ನಿಲ್ಲಿಸಲಾಗುತ್ತದೆ. ವಿವಾಹಕ್ಕೆ ಬರುವವರನ್ನು ಸ್ವಾಗತಿಸಲು ಸೇವಕನ ಪೋಷಾಕಿನಲ್ಲಿ ನಿಲ್ಲಿಸಿದ ಆ ಪ್ರತಿಮೆ ಹಿರೇಮದಕರಿ ನಾಯಕನ ರೂಪದಲ್ಲಿರುತ್ತದೆ. ಇದನ್ನು ನೋಡಿದ ನಾಗತಿಗೆ ಕ್ರೋಧ ಉಕ್ಕಿತು, ನರನಾಡಿಗಳ ರೋಷವನ್ನು ಹಿಡಿದಿಟ್ಟುಕೊಂಡು ಪ್ರತಿಮೆಯನ್ನು ಪ್ರೀತಿಯಿಂದ ಕಣ್ತುಂಬಿಕೊಳ್ಳುತ್ತಾ ಅದರ ಬಳಿ ಸಾರಿ ತನ್ನ ಕತ್ತಿನಲ್ಲಿದ್ದ ಹೂಮಾಲೆಯನ್ನು ಮನಸಾರೆ ಆ ಪ್ರತಿಮೆಗೆ ಹಾಕುತ್ತಾಳೆ. ಪುರಜನರು ತಮಗರಿವಿಲ್ಲದೆ ಚಪ್ಪಾಳೆ ಹಾಕಿ ಸಂಭ್ರಮಿಸುತ್ತಾರೆ. ನಾಗತಿಯು ಪ್ರತಿಮೆಗೆ ಜೀವವಿದೆ, ಅದರ ಬಿಸಿಯುಸಿರು ನನಗೆ ತಾಗುತ್ತಿದೆ, ನನ್ನನ್ನು ಸಮೀಪಿಸುತ್ತಿದೆ ಎಂದುಕೊಳ್ಳುತ್ತಿರುವಾಗಲೇ ಹಿರೇಮದಕರಿ ನಾಯಕ